<u>ದಿನಾಂಕಃ 13.12.2023 ರಂದು ಪ್ರಮಾಣ ವಚನ ಬೋದಿಸಲಾಗಿದೆ</u>

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಲ್.ಎ.ಡಿ.ಸಿ. ವಕೀಲರಿಂದಃ</u>

1) ನನ್ನ ಬಣ್ಣದ ಅಂಗಡಿಯನ್ನು ನಾನು ಪ್ರಾರಂಭಿಸಿದ ದಿನಾಂಕ, ದಿನ ಮತ್ತು ವರುಷ ನೆನಪಿಲ್ಲ. ಬಣ್ಣದ ಅಂಗಡಿಯ ವ್ಯಾಪಾರವನ್ನು ಮಾಡುವುದಕ್ಕೆ ನಾನು ಪರವಾನಿಗೆಯನ್ನು ಪಡೆದುಕೊಂಡಿರಲಿಲ್ಲ. ನಗರಸಬೆಯಿಂದ ಪರವಾನಿಗೆಯನ್ನು ತೆಗೆದುಕೊಳ್ಳುಬೇಕು ಎಂಬ ನಿಯಮ ನನಗೆ ಗೊತ್ತಿದೆ ಎಂದರೆ ಸರಿ. ಪರವಾನಿಗೆಯನ್ನು ತೆಗೆದುಕೊಳ್ಳುವುದಕ್ಕೆ ನನಗೆ ತೊಂದರೆ ಇರಲಿಲ್ಲ. ನಾನು ಪರವಾನಿಗೆಗೆ ನಗರಸಭೆಗೆ ಅರ್ಜಿಯನ್ನು ಕೊಟ್ಟಿರಲಿಲ್ಲ. ವಾಣಿಜ್ಯ ಇಲಾಖೆಯಿಂದ ಟಿನ್ ನಂಬರ್ ನ್ನು ತೆಗೆದುಕೊಂಡಿದ್ದೇನೆ. ಟಿನ್ ನಂಬರ್ ಈಗ ಹೇಳಲು ಆಗುವುದಿಲ್ಲ. ಬಣ್ಣದ ಅಂಗಡಿಯನ್ನು ತೆರೆಯುವುಕ್ಕೆ ಮುಂಚೆ ನಾನು ವರ್ಕ ಶಾಪ್ನಲ್ಲಿ ಕೆಲಸಕ್ಕೆ ಇದ್ದೆನು. ನಾನು 3-4 ಜನರ ವರ್ಕ ಶಾಪ್ನಲ್ಲಿ ಕೆಲಸಕ್ಕೆ ಇದ್ದೆನು. ನಾನು ಚಂದ್ರು ವರ್ಕ ಶಾಪ್ನಲ್ಲಿ ಕೆಲಸಕ್ಕೆ ಇದ್ದೆನು.

2) ನಾನು ''ಈ ಹಿಂದೆ ಸೈಕಲ್ ವೆಲ್ಡಿಂಗ್ ಶಾಪ್ ನ್ನು ಇಟ್ಟುಕೊಂಡು ಕೆಲಸ ಮಾಡಿಕೊಂಡಿದ್ದೆನು '' ಎಂದು ಪೊಲೀಸರ ಮುಂದೆ ಹೇಳಿಕೆಯಲ್ಲಿ ಹೇಳಿದ್ದೇನೆ ಎಂದರೆ ಸರಿ. ಸೈಕಲ್ ವೆಲ್ಡಿಂಗ್ ಶಾಪ್ ಅಂಗಡಿಯನ್ನು ಸುಮಾರು 15-20 ವರುಷ ಕಾಲ ಇಟ್ಟುಕೊಂಡಿದ್ದೆನು. ಬಣ್ಣದ ವ್ಯಾಪಾರದ ಬಗ್ಗೆ ನನಗೆ ಅನುಭವ ಇತ್ತು. ನನ್ನ ಭಾಮೈಕಳು ನನಗೆ ಹೇಳಿಕೊಟ್ಟಿದ್ದರು. ಬಣ್ಣದ ಅಂಗಡಿಯನ್ನು ಏಪ್ರಿಲ್ 21 ರಂದು ಬಾಡಿಗೆಗೆ ತೆಗೆದುಕೊಂಡಿದ್ದೆನು ಎಂದು ನನ್ನ ಹೇಳಿಕೆಯಲ್ಲಿ ಹೇಳಿದ್ದೆನು ಎಂದರೆ ಸರಿ. ಬಾಡಿಗೆ ಕರಾರು ನನ್ನ ಹೆಂಡತಿಯ ಹೆಸರಿನಲ್ಲಿ ಆಗಿದೆ. ನನ್ನ ಅಂಗಡಿ ಮಳಿಗೆಯ ಎಡಕ್ಕೆ 3 ಅಂಗಡಿಗಳು ಇವೆ ಮತ್ತು ಬಲಗಡೆಗೆ 2 ಅಂಗಡಿಗಳು ಇವೆ. ಈದ್ಗಾ ಮೈದಾನ ಕಾಂಪ್ಲೆಕ್ಸ ನಲ್ಲಿ ಒಟ್ಟು 10 ರಿಂದ 12 ಅಂಗಡಿಗಳು ಇರಬಹುದು.ನನ್ನ ಅಂಗಡಿಯಲ್ಲಿ ಮಾತ್ರ ಸಿಸಿ ಟಿ.ವಿ ಕ್ಯಾಮರ ಇದೆ, ಬೇರೆ ಅಂಗಡಿಗಳಲ್ಲಿ ಸಿಸಿ ಟಿ.ವಿ ಕ್ಯಾಮರಾ ಇಲ್ಲ. ಸೇಫ್ಟೀ ಗಾಗಿ ನನ್ನ ಬಣ್ಣದ ಅಂಗಡಿಗೆ ಸಿಸಿ ಟಿ.ವಿ ಕ್ಯಾಮರವನ್ನು ಹಾಕಿಸಿದ್ದೇನೆ. ನಮ್ಮ ಅಗಂಡಿಗೆ ಸಿಸಿ ಟಿ.ವಿ ಕ್ಯಾಮರವನ್ನು ಅಳವಡಿಸಿದ ವ್ಯಕ್ತಿಯು ಸುಮಾರು ವರುಷಗಳಿಂದ ಪರಿಚಯ ಇದ್ದಾರೆ. ಎಷ್ಟು ವರುಷಗಳಿಂದ ಪರಿಚಯ ಇದ್ದಾರೆ ಎಂದರೆ ಗೊತ್ತಿಲ್ಲ. ನಾನು ಯೂನಸ್ ರವರಿಂದ ಸಿಸಿ ಟಿ.ವಿ ಕ್ಯಾಮರ ಮತ್ತು ಅದಕ್ಕೆ ಬೇಕಾಗಿದ್ದ ಕಂಪ್ಯೂಟರ್, ಮಾನಿಟರ್ ಮತ್ತು ಇತರೆ ಸಾಮಾನುಗಳನ್ನು ಅವರಿಂದಲೇ ಪಡೆದುಕೊಂಡಿದ್ದೆನು.

3) ಬೆಳಿಗ್ಗೆ 9 ರಿಂದ 10.00 ಗಂಟೆ ಒಳಗೆ ಪೊಲೀಸರು, ನನಗೆ ಕರೆ ಮಾಡಿ, ನಿಮ್ಮ ಬಣ್ಣದ ಅಂಗಡಿ ಒಳಗೆ ಇರುವ ಸಿಸಿ ಟಿ.ವಿ ಕ್ಯಾಮರವನ್ನು ನೋಡಬೇಕು ಎಂದರು. ಪೊಲೀಸರ ಕರೆ ಬಂದಾಗ ನಾನು ಮನೆಯಲ್ಲೆ ಇದ್ದೆನು, ಆಗ ಕೊರೋನಾ ಸಮಯ ಆಗಿತ್ತು. ನಾನು 5-10 ನಿಮಿಷದ ಒಳಗಡೆ ನಾನು ಒಬ್ಬನೇ ಅಂಗಡಿಗೆ ಬಂದೆನು. ಆಗ ಅಂಗಡಿಯ ಹತ್ತಿರವೆಲ್ಲ ಜನರು ನಿಂತುಕೊಂಡಿದ್ದರು. ಪೊಲೀಸರು ಅಲ್ಲಿಗೆ ಬಂದರು, ನನಗೆ, ಕ್ಯಾಮರಾಗಳೆಲ್ಲ ರನ್ನಿಂಗ್ ಇದೆಯಾ ಎಂದು ಕೇಳಿದರು. ಆ ಸಮಯದಲ್ಲಿ ಕೋರೋನಾ ಸಮಯ ಇದ್ದುದರಿಂದ ಅಂಗಡಿಗಳು ಬಂದ್ ಇರುತ್ತಿತ್ತು. ಆ್ಯಂಬುಲೆನ್ ಬಂದಿತ್ತು, ಆ್ಯಂಬುಲೆನ್ಸ್ ನಲ್ಲಿ ಶವವನ್ನು ತೆಗೆದುಕೊಂಡು ಹೋದರು. ಶವ ಹೇಗೆ ಬಂತು, ಯಾವಾಗ ಬಂದಿತು ಎಂದು ನನಗೆ ಗೊತ್ತಿರಲಿಲ್ಲ. ಅಕ್ಕಪಕ್ಕದ ಅಂಗಡಿಯವರು, ಶವದ ಬಗ್ಗೆ ಏನು ಮಾತನಾಡುತ್ತಿರಲಿಲ್ಲ, ಹಳೆ ಪ್ಲಾಸ್ಟಿಕ್, ಚೀಲ ಮತ್ತು ಗುಜರಿ ಅಂಗಡಿಯ ಸಾಧಿಕ್ ಎನ್ನುವವರು ಶವದ ಬಗ್ಗೆ ನನಗೆ ಗೊತ್ತು ಎಂದು ಹೇಳಿದರು. ಸಾಧಿಕ್ ಸಹ ಸ್ಥಳದಲ್ಲಿ ಇದ್ದರು. ಸಾಧಿಕ್, ಅವರೇ ಬಂದಿದ್ದರಾ ಅಥವಾ ಪೊಲೀಸರು ಅವರನ್ನು ಸ್ಥಳಕ್ಕೆ ಕರೆಸಿದ್ದರಾ ಎಂದು ನನಗೆ ಗೊತ್ತಿಲ್ಲ. ಆ್ಯಂಬುಲೆನ್ಸ್ ನಲ್ಲಿ ಶವವನ್ನು ತೆಗೆದುಕೊಂಡು ಹೋದ ಕೂಡಲೇ ಅಲ್ಲಿ ಇದ್ದ ಎಲ್ಲ ಜನರು ಹೊರಟುಹೋದರು ಎಂದರೆ ಸಾಕ್ಷಿಯು ನಾನು ಅಲ್ಲೆ ಇದ್ದು ರಕ್ತ ಬಿದ್ದಿದ್ದ ಕಲೆಯನ್ನು ತೊಳೆಯುತ್ತಿದ್ದೆನು ಎಂದು ನುಡಿಯುತ್ತಾರೆ. ರಕ್ತದ ಕಲೆಯನ್ನು ತೊಳೆಯುವುದು ಸುಮಾರು ಮಧ್ಯಾಹ್ನದ ವರೆಗೆ ಆಯಿತು. ರಕ್ತದ ಕಲೆಯನ್ನು ತೊಳೆದ ನಂತರ ನಾನು ಅಂಗಡಿ ಹತ್ತಿರವೇ ಇದ್ದೆನು. ಯಾನಸ್ ನ್ನು ಪೊಲೀಸರು ಕರೆದುಕೊಂಡು ಬಂದರು. ಆಗ ಸಮಯ ಎಷ್ಟು ಗಂಟೆಯಾಗಿತ್ತು ಎಂದು ಗಮನಿಸಲಿಲ್ಲ.

(ಬೆಳಗಿನ ನ್ಯಾಯಾಲಯದ ಕಲಾಪದ ಅವಧಿ ಮುಗಿದಿದ್ದರಿಂದ, ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು).

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

<u>ದಿನಾಂಕಃ 13.12.2023 ರಂದು ಪ್ರಮಾಣ ವಚನ ಬೋದಿಸಲಾಗಿದೆ</u>

<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಲ್.ಎ.ಡಿ.ಸಿ. ವಕೀಲರಿಂದಃ</u>

1) ಆ ದಿವಸ ನಾನು ನನ್ನ ಬಣ್ಣದ ಅಂಗಡಿಗೆ 2-3 ಭಾರಿ ಹೋಗಿ ಬಂದಿದ್ದೆನು. ನಾನು ಮಧ್ಯಾಹ್ನ ಅಂದಾಜು 3 ಅಥವಾ 4 ಗಂಟೆಗೆ ನನ್ನ ಬಣ್ಣದ ಅಂಗಡಿಗೆ ಹೋಗಿದ್ದೆನು, ಗಂಟೆ ಸರಿಯಾಗಿ ನೆನಪಿಲ್ಲ. ಕ್ಯಾಮರಾದವರು ಬಂದಿದ್ದರಿಂದ, ನಾನು ಮಧ್ಯಾಹ್ನ ನನ್ನ ಅಂಗಡಿಗೆ ಹೋಗಿದ್ದೆನು. ನಾನು ಬೆಳಿಗ್ಗೆ ಹೋಗಿದ್ದಾಗ ಕ್ಯಾಮರಾದವರು ಅಂಗಡಿಗೆ ಬಂದಿರಲಿಲ್ಲ. 3 ಮತ್ತು 4 ನೇ ಕ್ಯಾಮರಾಗಳು ಅಂಗಡಿಗೆ ಹೊರಗಡೆ ಇತ್ತು. 3 ಮತ್ತು 4 ನೇ ಕ್ಯಾಮರಾಗಳು ಎಷ್ಟು ದೂರದವರೆಗೆ ದೃಶ್ಯಾವಳಿಗಳನ್ನು ಸೆರೆ ಹಿಡಿಯುತ್ತಿತ್ತು ಎಂದು ಹೇಳಲು ಆಗುವುದಿಲ್ಲ. ಪೊಲೀಸರು ನನ್ನನ್ನು ಠಾಣೆಗೆ ಕರೆಸಿಕೊಂಡು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದರು ಎಂದರೆ ಸರಿ. ಪೊಲೀಸ್ ಠಾಣೆಯಲ್ಲಿ ನನಗೆ ಓದಿ ಹೇಳಿದರು, ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದೆನು. ಪೊಲೀಸರು ನನಗೆ ಠಾಣೆಗೆ ಬರುವಂತೆ ಹೇಳಿ ಯಾವುದೇ ನೋಟಿಸನ್ನು ಕೊಟ್ಟಿರಲಿಲ್ಲ. ಸಿಸಿ ಕ್ಯಾಮರಾದ ಯೂನಸ್ ರವರನ್ನು ಪೊಲೀಸರು ನಮ್ಮ ಅಂಗಡಿಗೆ ಕರೆದುಕೊಂಡು ಬಂದು ಸಿಸಿ ಕ್ಯಾಮರಾವನ್ನು ಪೆನ್‌ಡ್ರೈವ್ ಗೆ ಡೌನ್ ಲೋಡ್ ಮಾಡಿಕೊಂಡರು. ಡೌನ್ ಲೋಡ್ ಮಾಡಿಕೊಳ್ಳುವಾಗ ನಾನು ಅಲ್ಲೆ ಪಕ್ಕದಲ್ಲಿ ನಿಂತುಕೊಂಡಿದ್ದೆನು. ನಾನು, ಯೂನಸ್, ಸಾಧಿಕ್, ಇನ್ನೊಬ್ಬರು ಇದ್ದರು, ಅವರು ಹೆಸರು ಗೊತ್ತಿಲ್ಲ. ಹೆಣ ಬಿದ್ದಿದ್ದ ಘಟನೆ ಯಾವ ದಿನ ನಡೆದಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಹೇಳುತ್ತಾರೆ, ಆ ಸಮಯದಲ್ಲಿ ಕೋರೋನ ಅವಧಿ ಇತ್ತು ಎಂದು.

2) ನಾನು ನನ್ನ ಬಣ್ಣದ ಅಂಗಡಿಗೆ ಸಿಸಿ ಟಿವಿ ಕ್ಯಾಮರಾವನ್ನು ಹಾಕಿಸಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಆ ದಿವಸ ಅಂದರೆ ಹೆಣ ಬಿದ್ದಿದ್ದ ದಿವಸ ಯೂನಸ್ ನನ್ನು ಕರೆದುಕೊಂಡು ಬಂದು ನಮ್ಮ ಅಂಗಡಿಗೆ ಸಿಸಿ ಟಿವಿ ಕ್ಯಾಮರಾಗಳ ವ್ಯವಸ್ತೆಯನ್ನು ಮಾಡಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ. ನಾನು ಸಿಸಿ ಟಿವಿ ಕ್ಯಾಮರಾದಲ್ಲಿ ವ್ಯಕ್ತಿ ಸತ್ತು ಮಲಗಿದ್ದ ದೃಶ್ಯವನ್ನು ಮತ್ತು ಇನ್ನೊಬ್ಬ ವ್ಯಕ್ತಿ ಕಲ್ಲನ್ನು ಎತ್ತಿಕೊಂಡು ಬರುತ್ತಿದ್ದುದನ್ನು ನಾನು ನೋಡಿರಲಿಲ್ಲ ಎಂದರೆ ಸರಿಯಲ್ಲ. ಸಾಧಿಕ್ ರವರು, ದೃಶ್ಯಾವಳಿಯನ್ನು ನೋಡಿ ಅದರಲ್ಲಿ, ಕಲ್ಲು ಎತ್ತಿ ಹಾಕುತ್ತಿದ್ದ ವ್ಯಕ್ತಿಯನ್ನು ಗುರುತಿಸಿದ್ದರು ಮತ್ತು

ಆತನ ಹೆಸರು ಮಾದಪ್ಪ ಎಂದು ಹೇಳಿದ್ದರು ಹಾಗೂ ಆತನ ತಲೆಯ ಮೇಲೆ ಕಲ್ಲನ್ನು ಎತ್ತಿ ಹಾಕಿ ಕೊಲೆ ಮಾಡಿದ ವ್ಯಕ್ತಿ ಮುತ್ತುರಾಜ ಎಂದು ಗುರುತಿಸಿದ್ದರು ಎಂದು ಸರ್ಕಾರಿ ಅಭಿಯೋಜಕರವರ ಪಾಟೀ ಸವಾಲಿನಲ್ಲಿ ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ಜೊತೆ ಶರೀಕಾಗಿ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಏಪ್ರಿಲ್ ತಿಂಗಳಲ್ಲಿ ಅಂಗಡಿಯನ್ನು ಬಾಡಿಗೆಗೆ ತೆಗೆದುಕೊಂಡಿದ್ದೆನು ಎಂದರೆ ಸರಿ ಹಾಗೂ ಅದೇ ಏಪ್ರಿಲ್ ತಿಂಗಳಲ್ಲಿ ಸಿಸಿ ಟಿವಿ ಕ್ಯಾಮರಾವನ್ನು ಅಂಗಡಿಗೆ ಹಾಕಿಸಿದ್ದೆನು ಎಂದರೆ ಸರಿ.

3) ನಾನು ಪೊಲೀಸರು ಮುಂದೆ ನೀಡಿದ ಹೇಳಿಕೆಯಲ್ಲಿ '' ದಿಃ 27.04.2021 ರಂದು ರಾತ್ರಿ 8.25 ರಿಂದ ಗಂಟೆಯಿಂದ ರಾತ್ರಿ 11.00 ಗಂಟೆಯವರೆಗೆ ರೆಕಾರ್ಡ ಆಗಿರುವ ದೃಶ್ಯಾವಳಿಗಳನ್ನು ಒಂದು ಸೋನಿ ಡಿಸ್ಕ್ 08 ಜಿಬಿ ಪೆನ್ ಡ್ರೈವ್ ಗೆ ಕಾಪಿ ಮಾಡಿಕೊಂಡುಅ ದನ್ನು ತನ್ನ ಬಳಿ ಇದ್ದ ಡೆಲ್ ಕಂಪನಿಯ ಲ್ಯಾಪ್ ಟಾಪ್ ಗೆ ಡೌನ್ ಲೋಡ್ ಮಾಡಿಕೊಂಡು ನಂತರ ಒಂದು ಡಿವಿಡಿ (ಸೋನಿ) 4.7 ಜಿ ಬಿ ಗೆ ಬರ್ನ್ ಮಾಡಿ ನಂತರ ಸದರಿ ದೃಶ್ಯಾವಳಿಗಳನ್ನು ಮತ್ತೆ ಅದೇ ರೀತಿ ಇರುವ ಒಂದೊಂದು ಪೆನ್ ಡ್ರೈವ್ ಮತ್ತು ಡಿವಿಡಿಗೆ ಕಾಪಿ ಮಾಡಿಕೊಂಡು ಅವುಗಳಲ್ಲಿ ಒಂದುಕ ಪೆನ್ ಡ್ರೈವ್ ಮತ್ತು ಒಂದು ಡಿವಿಡಿಯನ್ನು ಪ್ರತ್ಯೇಕ ಪ್ರತ್ಯೇಕವಾಗಿ ಬಿಳಿಯ ಬಟ್ಟೆಯ ಚೀಲದಲ್ಲಿ ಹಾಕಿ ಬಾಯಿ ಕಟ್ಟಿ ಅರಗು ಹಚ್ಚಿ ಸಿಪಿಐ ಮಂಡ್ಯ ಎಂಬ ಇಂಗ್ಲೀಷ್ ಅಕ್ಷರದಿಂದ ಮೊಹರು ಮಾಡಿ ಅವಶ್ಯಕತೆ ಇದ್ದಲ್ಲಿ ತಜ್ಞರ ಪರೀಕ್ಷೆಗೆ ಕಳುಹಿಸಿಕೊಡಲು ಕೋರಿಕೊಂಡು ಘನ ನ್ಯಾಯಾಲಯಲದ ಅನುಮತಿ ಪಡೆಯಲಾಗುವುದು ಎಂದು ತಿಳಿಸಿ ವಶಕ್ಕೆ ಪಡೆದುಕೊಂಡಿರುತ್ತಾರೆ '' ಹೇಳಿಲ್ಲ ಎಂದರೆ ಸರಿಯಲ್ಲ. ಲಾಕ್ ಡೌನ್ ಸಮಯ ಇದ್ದುದರಿಂದ ನಾನು ಈ ಘಟನೆ ನಡೆದ ಸಂದರ್ಭದಲ್ಲಿ ಅಂಗಡಿಯ ಬಾಗಿಲನ್ನು ತೆರೆದಿರಲಿಲ್ಲ.

4) ನಾನು ಆರೋಪಿಯನ್ನು ನಮ್ಮ ಅಂಗಡಿ ಬಳಿ ಈ ಮೊದಲು ನೋಡಿರುತ್ತೇನೆ. ಆತ ಪ್ಲಾಸ್ಟಿಕ್, ಖಾಲಿ ಬಾಟಲನ್ನು ಹಳೆ ಗುಜುರಿಗೆ ಹಾಕಿ ಮಾರುತ್ತಿದ್ದನು. ಆರೋಪಿಯು ಅಲ್ಲೆ ನಮ್ಮ ಅಂಗಡಿಯ ಪಕ್ಕದಲ್ಲಿ ಇದ್ದ ಅಂಗಡಿಯ ಪಕ್ಕದಲ್ಲಿ ಹಳೆ ಗುಜುರಿಗೆ ಆಗಾಗ ಪ್ಲಾಸ್ಟಿಕ್, ಖಾಲಿ ಬಾಟಲನ್ನು ತಂದು ಗುಜುರಿಯಲ್ಲಿ ಮಾರುತ್ತಿದ್ದುದನ್ನು ನೋಡುತ್ತಿದ್ದೆನು. ನಾನು ಆರೋಪಿಯನ್ನು ಯಾವತ್ತಿಗೂ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಕೋರೋನ ಟೈಮ್ ಆಗಿದ್ದರಿಂದ ನಾನು ಅಂಗಡಿ ಬಳಿ ಹೋಗಿರಲಿಲ್ಲ ಎಂದರೆ ಸಾಕ್ಷಿಯು ಕೊರೋನಾ ಬರುವುದಕ್ಕೆ ಮುಂಚೆ ನಾನು ಅಂಗಡಿಗೆ ಹೋಗುತ್ತಿದ್ದರಿಂದ ನಾನು ಆರೋಪಿಯನ್ನು ನೋಡುತ್ತಿದ್ದೆನು ಎಂದು ನುಡಿಯುತ್ತಾರೆ. ಸಾಧಿಕ್

ಪಾಷರವರು ನನಗೆ ಪರಿಚಯಸ್ತರು ಮತ್ತು ನನ್ನ ಸ್ನೇಹಿತರು ಎಂದರೆ ಸರಿ. ಸಾಕ್ಷಿಯು ಸ್ವತಃ ನುಡಿಯುತ್ತಾರೆ, ಅವರು ನಮ್ಮ ಅಂಗಡಿಯ ಪಕ್ಕದಲ್ಲಿ ಇದ್ದಾರೆ. ಘಟನೆ ಬಗ್ಗೆ ಮತ್ತು ಆರೋಪಿ ಬಗ್ಗೆ ನನಗೆ ಏನು ಗೊತ್ತಿಲ್ಲದೇ ಇದ್ದರೂ ಸಹ ನಾನು ಪೊಲೀಸರೊಂದಿಗೆ ಮತ್ತು ನನ್ನ ಸ್ನೇಹಿತ ಸಾಧಿಕ್ ಪಾಷ ರವರೊಂದಿಗೆ ಶರೀಕಾಗಿ ಅವರು ಹೇಳಿಕೊಟ್ಟಿರುವಂತೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯ ವಿಷಯವನ್ನು ನಾನು ಯಾರೊಂದಿಗೂ ಹೇಳಿಲ್ಲ ಅಥವಾ ಹಂಚಿಕೊಂಡಿಲ್ಲ.

<u>ಮರು ವಿಚಾರಣೆಃ </u>ಏನು ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.